**ಪಿ.ಡಬ್ಲ್ಯೂ.2**

ಇಂದು ದಿಃ **05.02.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ನಂ.1 ರಿಂದ 8 ರವರ ಪರ ಶ್ರೀ ಸಿ ಎ ಕಟಕೋಳ ವಕೀಲರಿಂದ**

1. ನಾನು ಶಾಲೆ ಕಲಿತಿಲ್ಲ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ. ವಾದಿ ನನ್ನನ್ನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾರೆ. ಆತ ನನಗೆ ಹೇಳುವವರೆಗೂ ಈ ದಾವೆಯ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವ ಸಂಗತಿಗಳನ್ನು ವಾದಿಯೇ ಹೇಳಿಸಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ವಾದಿ ಆತನ ಚಿಕ್ಕಪ್ಪಂದಿರ ವಿರುದ್ದ ದಾಖಲಿಸಿರುತ್ತಾನೆ. ಹಾಗೂ ಈ ದಾವೆಯಲ್ಲಿ ಆತ ತನ್ನ ಚಿಕ್ಕಪ್ಪಂದಿರನ್ನು ಬಿಟ್ಟು ಬೇರ ಯಾರನ್ನು ಪಕ್ಷಕಾರರನ್ನಾಗಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಹಾಗೂ ಈ ದಾವೆಯಲ್ಲಿ ಏನು ಪರಿಹಾರ ಕೊರಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಸ್ವತ್ತುಗಳಲ್ಲಿ ತನ್ನ ಹಿಸ್ಸೆಯನ್ನು ಕೇಳಿ ದಾವೆ ಹಾಕಿರುತ್ತಾನೆ ಎನ್ನುತ್ತಾರೆ.

2. ವಾದಿ ಈ ಮೊದಲು ಅಸಲು ದಾವಾ ನಂ.264/2012 ನ್ನು ದಾಖಲಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಅದೇ ರೀತಿ ಆತ ಅಸಲು ದಾವಾ ನಂ.537/2015 ನ್ನು ದಾಖಲಿಸಿದ್ದ ಬಗ್ಗೆಯೂ ಸಹ ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ದಾವೆಗಳು ಏನಾಗಿವೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ 3 ಜಮೀನು ಹಾಗೂ ಒಂದು ಮನೆ ಇದೆ. ಈಗ ದಾವಾ ಸ್ವತ್ತುಗಳು ಯಾರ ಸ್ವಾದಿನದಲ್ಲಿ ಇವೆ ಹಾಗೂ ಅವುಗಳ ವಸ್ತುಸ್ಥಿತಿ ಹೇಗಿದೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನವಲೂರು ಗ್ರಾಮ ಹಾಗೂ ವಿನಾಯಕ ನಗರ ಬೇರೆ ಬೇರೆ ಯಾಗಿವೆ. ನನ್ನ ಮನೆ ನವಲೂರಿನ ಮ್ಯಾಗೇರಿ ಓಣಿಯಲ್ಲಿ ಇದೆ. ನನ್ನ ಹಾಗೂ 1 ರಿಂದ 8 ನೇ ಪ್ರತಿವಾದಿಯರ ಮನೆ 2 ಕಿ ಮಿ ಅಂತರದಲ್ಲಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿಯವರ ಹಾಗೂ ನಮ್ಮ ಮನೆ ಒಂದೇ ಓಣಿಯಲ್ಲಿವೆ ಎನ್ನುತ್ತಾರೆ. ಸದರಿ 1 ರಿಂದ 8 ನೇ ಪ್ರತಿವಾದಿಯರು ಬೇರೆ ಓಣಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

**ಪಿ.ಡಬ್ಲೂ.2**

3. ಹಜಾರೆ ಮನೆತನ ಹಾಗೂ ನಮ್ಮ ಮನೆತನ ಬೇರ ಬೇರೆ ಎಂದರೆ ಸರಿ. ಸದರಿ ಮನೆತನಕ್ಕೂ ಹಾಗೂ ನಮ್ಮ ಮನೆತನಕ್ಕೂ ಯಾವುದೇ ನಿಕಟವಾದ ಸಂಬಂದ ಹಾಗೂ ಸಂಪರ್ಕ ಇಲ್ಲ ಎಂದರೆ ಸರಿಯಲ್ಲ. ಹಜಾರೆ ಕುಟುಂಬದ ವ್ಯವಹಾರಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಸದರಿಯವರ ಮನೆತನದ ಯಾವುದೇ ವ್ಯವಹಾರದಲ್ಲಿ ನಾನು ಭಾಗವಹಿಸಿಲ್ಲ ಎಂದರೆ ಸರಿ. ವಾದಿ ವಾದಪತ್ರದಲ್ಲಿ ತೋರಿಸಿದ ವಂಶಾವಳಿ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಹಜಾರೆ ಮನೆತನದ ಮೂಲ ಪುರುಷ ಹನುಮಂತಪ್ಪ. ಆತನ ಹೆಂಡತಿಯ ಹೆಸರು ಸಾವಕ್ಕ. ಸದರಿಯವರಿಗೆ ಮೂರು ಜನ ಗಂಡು ಮಕ್ಕಳು 5 ಜನ ಹೆಣ್ಣು ಮಕ್ಕಳು. ಸದರಿ ಮೂರು ಜನ ಗಂಡು ಮಕ್ಕಳ ಹೆಸರು ಫಕ್ಕಿರಪ್ಪ , ಗೀರಿಶ ಮತ್ತು ಮಾರುತಿ ಎಂದು. ಹಾಗೂ 5 ಜನ ಹೆಣ್ಣು ಮಕ್ಕಳು ಹೆಸರು ನನಗೆ ಗೊತ್ತಿಲ್ಲ.

4. ಸದರಿ ಹನುಮಂತಪ್ಪ ಹಾಗೂ ಸಾವಕ್ಕ ರವರ ಮಗ ಮಾರುತಿ ರವರ ಮದುವೆ ಹಿಂಚಗಿರಿ ಮಠದಲ್ಲಿ ಆಗಿದೆ. ಸದರಿ ಹಿಂಚಗಿರಿ ಮಠ ಯಾವ ತಾಲೂಕು ಹಾಗೂ ಯಾವ ಜಲ್ಲೆಯಲ್ಲಿ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿಯವರ ಮದುವೆ ಹುಬ್ಬಳ್ಳಿಯ ಹೊಸುರ ಬಳಿ ಇರುವ ತಿಮ್ಮಸಾಗರ ಮಠದಲ್ಲಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಮಾರುತಿಯ ಹೆಂಡತಿ ಸಾವಕ್ಕ ಮಾರುತಿಯ ಅಣ್ಣನ ಖಾಸ ಮಗಳು ಎಂದರೆ ಸರಿ. ಮಾರುತಿಯ ಹೆಂಡತಿಯ ಹೆಸರು ಸಾವಕ್ಕ ಹಾಗೂ ತಾಯಿಯ ಹೆಸರು ಸಹ ಸಾವಕ್ಕ ಎಂದು ಇದುದ್ದರಿಂದ ಮಾರುತಿಯ ಹೆಂಡತಿಗೆ ಸಾವಕ್ಕ ಎಂತಲೂ ಹಾಗೂ ದ್ಯಾಮವ್ವ ಎಂತಲೂ ಕರೆಯುತ್ತಿದ್ದರು ಎಂದರೆ ಸರಿ. ಸದರಿ ಮಾರುತಿಯ ಹೆಂಡತಿಯ ತಂದೆಯ ಹೆಸರು ಯಲ್ಲಪ್ಪ ಭರಮಪ್ಪ ವಾಘಮೋಡೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರುತಿಯ ಹೆಂಡತಿಯ ತಾಯಿಯ ಹೆಸರು ದೇವಕ್ಕ ವಾಘಮೋಡೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರುತಿಯ ಹೆಂಡತಿಯ ತವರು ಮನೆ ಕುಂದಗೋಳ ಎಂದರೆ ಸರಿಯಲಲ ಸಾಕ್ಷಿ ಅವಳ ತವರು ಮನೆ ಬೆಳ್ಳಿಗಟ್ಟಿ ಎನ್ನುತ್ತಾರೆ. ಸದರಿಯವರ ತವರು ಮನೆ ಕುಂದಗೊಳ ಎಂದು ಗೊತ್ತಿದ್ದರು ಸಹ ಬೆಳ್ಳಿಗಟ್ಟಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಾರುತಿರವರ ಹೆಂಡತಿ ಸಾವಕ್ಕ ರವರ ಬೆಳ್ಳಿಗಟ್ಟಿಯ ತವರು ಮನೆಯ ಮನೆತನದ ಹೆಸರು ನನಗೆ ಗೊತ್ತಿಲ್ಲ. ಸದರಿಯವರ ಬೆಳ್ಳಿಗಟ್ಟಿ ಮನೆತನದಲ್ಲಿ ಯಾರು ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ.

5. ಸದರಿ ಮಾರುತಿ ಯಾವ ಇಸ್ವಿಯಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆತ ನವಲೂರಿನಲ್ಲಿ ತೀರಿಕೊಂಡಿರುತ್ತಾನೆ. ಸದರಿ ಮಾರುತಿಯ ಹೆಪಿಂಡತಿ ಸಾವಕ್ಕ ದಿಃ 15.06.1988 ರಲ್ಲಿ ತನ್ನ ತವರು ಮನೆ ಕುಂದಗೊಳದಲ್ಲಿ ತೀರಿಕೊಂಡಿರುತಾಳೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನವಲೂರಿನಲ್ಲಿ ತೀರಿಕೊಂಡಿರುತ್ತಾಳೆ ಎನ್ನುತ್ತಾರೆ. ಸದರಿಯವಳು ನವಲೂರಿನಲ್ಲಿ ತಿರಿಕೊಂಡಿರುತ್ತಾಳೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾರುತಿ ಹೆಂಡತಿ

ಸಾವಕ್ಕ ಅಲಿಯಾಸ ದ್ಯಾಮವ್ವ ರವರಿಗೆ ಯಾವುದೇ ಸಂತಾನ ಇರಲಿಲ್ಲ ಎಂದರೆ ಸರಿಯಲ್ಲ. ವಾದಿ ಸಾವಕ್ಕ ಅಲಿಯಾಸ ದ್ಯಾಮವ್ವ ರವರ ಮಗ ಅಲ್ಲ ಎಂದರೆ ಸರಿಯಲ್ಲ. ವಾದಿ ಸದರಿ ಸಾವಕ್ಕ ಅಲಿಯಾಸ ದ್ಯಾಮವ್ವ ರವರ ಮಗ ಅಲ್ಲ ಎಂದು ನನಗೆ ಗೊತ್ತಿದ್ದರು ಸಹ ಆತ ಸದರಿಯವರ ಮಗ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ವಾದಿ ಕೆಲಗೇರಿಯಲ್ಲಿ ವಾಸವಾಗಿದ್ದಾನೆ ಎಂದರೆ ಸರಿ. ಆತನ ಎಲ್ಲ ದಾಖಲೆಗಳಲ್ಲಿ ಆತ ಕೆಲಗೇರಿಯ ವಾಸಿ ಎಂದು ನಮೂದು ಇದೆ ಎಂದರೆ ಇರಬಹುದು. ವಾದಿ ಈಗಲೂ ಸಹ ಕೆಲಗೇರಿಯಲ್ಲಿ ವಾಸವಾಗಿದ್ದಾನೆ ಎಂದರೆ ಸರಿ. ವಾದಿ ಯಾವತ್ತು ನವಲೂರು ಗ್ರಾಮದಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ಆತ ನವಲೂರು ಗ್ರಾಮದ ವಾಸಿ ಅಲ್ಲ ಎಂದರೆ ಸರಿಯಲ್ಲ. ವಾದಿ 1 ರಿಂದ 8 ನೇ ಪ್ರತಿವಾದಿಯವರ ಮನೆತನಕ್ಕೆ ಯಾವುದೇ ರೀತಿಯಿಂದ ಸಂಬಂದ ಅಲ್ಲ ಎಂದರೆ ಸರಿಯಲ್ಲ. ವಾದಿ 1 ರಿಂದ 8 ನೇ ಪ್ರತಿವಾದಿಯವರ ಮನೆತನಕ್ಕೆ ಯಾವುದೇ ರೀತಿಯಿಂದ ಸಂಬಂದ ಇಲ್ಲ ಎಂದು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಾರುತಿ ತಂದೆ ಹನುಮಂತಪ್ಪ ಹಜಾರೆ ರವರ ಪರಿಚಯ ನನಗೆ ಯಾವತ್ತು ಇರಲಿಲ್ಲ ಎಂದರೆ ಸರಿಯಲ್ಲ. ಹಾಗೂ ವಾದಿಯ ಪರಿಚಯ ಸಹ ನನಗೆ ಯಾವತ್ತು ಇಲ್ಲ ಎಂದರೆ ಸರಿಯಲ್ಲ.

7. ವಾದಿಯ ತಾಯಿ ಯಾವಾಗ ತಿರಿಕೊಂಡಿರುತ್ತಾಳೆ ಎಂದು ನನಗೆ ಮಾಹಿತಿ ಇಲ್ಲ. ವಾದಿಯ ತಾಯಿ ಎಲ್ಲಿ ತಿರಿಕೊಂಡಿರುತ್ತಾಳೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಮ್ಮ ಗ್ರಾಮದ ಮಂಜುನಾಥ ಬಸಪ್ಪ ಬಡಕುರಿ ರವರ ಪರಿಚಯ ನನಗೆ ಇಲ್ಲ. ಆತ ನಮ್ಮ ಮನೆ ಇರುವ ಓಣಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಆತನ ಪರಿಚಯ ನನಗೆ ಇಲ್ಲ. ನಾನು ಮತದಾನ ಮಾಡುತ್ತೇನೆ. ಸದರಿ ನವಲೂರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ನಮ್ಮ ಪ್ರದೇಶದ ಕಾರ್ಪೊರೇಟರ ರವರ ಹೆಸರು ನನಗೆ ಈಗ ನೆನಪಿಲ್ಲ. ಸದರಿ ಮಂಜುನಾಥ ಬಸಪ್ಪ ಬಡಕುರಿ ಇನ್ನೊಂದು ಪ್ರದೇಶಕ್ಕೆ ಕಾರ್ಪೊರೇಟ ಆಗಿರುತ್ತಾರೆ ಎಂದರೆ ಇರಹಹುದು. ಆತ ನನಗೆ ಪರಿಚಯಸ್ಥ ಎಂದರೆ ಸರಿಯಲ್ಲ. ಆತ ರಾಜಕೀಯ ಪ್ರಭಾವಿ ವ್ಯಕ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಂಜುನಾಥ ಬಸಪ್ಪ ಬಡಕುರಿ ದಾವಾ ಸರ್ವೆ ನಂ.53/1 ಎ ಗೆ ಸಂಬಂದಿಸಿದಂತೆ 38 ಗುಂಟೆ 9 ಆಣೆಗೆ ಸಂಬಂದಿಸಿದಂತೆ ದಿಃ 13.06.2022 ರಂದು ಖರೀದಿ ಕರಾರು ಪತ್ರವನ್ನು ಬರೆದುಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ವಾದಿ ನನಗೆ ಹೇಳಿಲ್ಲ. ಸದರಿ ಕರಾರು ಪತ್ರದ ವ್ಯಹವಾರದಲ್ಲಿ ನಾನು ಸಹ ಭಾಗವಹಿಸಿದ್ದರು ಆ ಬಗ್ಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಪ್ರಾಸಾ-3 ಗಿರಿಮಲ್ಲಪ್ಪ ಮತ್ತಿಗಟ್ಟಿ ನನಗೆ ಪರಿಚಯಸ್ಥನಲ್ಲ. ದಿಃ 19.01.2024 ರಂದು ನನ್ನೊಂದಿಗೆ ಪ್ರಾಸಾ3 ರವರ ಸಾಕ್ಷಿ ನುಡಿದಿರುತ್ತಾರೆ ಎಂದರೆ ಇರಬಹುದು. ಸದರಿ ಪ್ರಾಸಾ3 ರವರು ನಮ್ಮ ಓಣಿಯಲ್ಲಿಯೇ ವಾಸವಾಗಿದ್ದಾರೆ ಎಂದರೆ ಇರಬಹುದು. ಆತ ಸದರಿ ಮಂಜುನಾಥ ಬಡಕುರಿ ರವರ ಕರಾರು ಪತ್ರಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಂಜುನಾಥ ಬಡಕುರಿ ರವರು ತಮ್ಮ ರಾಜಕೀಯ ಪ್ರಭಾವ ಬಳಿಸಿ 1 ರಿಂದ 8 ನೇ ಪ್ರತಿವಾದಿಯರಿಗೆ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಆಗಾಗ ತೊಂದರೆ ನೀಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಮದ್ಯಪಾನ ಮಾಡುವ ಹಾಗೂ ಜೂಜಾಟ ಆಡುವ ಚಟ ಇದೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ಸದರಿ ಮಂಜುನಾಥ ಬಡಕುರಿ ರವರೇ ವಾದಿಗೆ ಕುಮ್ಮಕ್ಕು ದಾಖಲಿಸಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿ 1 ರಿಂದ 8 ನೇ ಪ್ರತಿವಾದಿನಯರ ಮನೆತನಕ್ಕೆ ಯಾವುದೇ ರೀತಿಯಿಂದ ಸಂಬಂದಿತ ಅಲ್ಲ ಎಂದು ಗೊತ್ತಿದ್ದರು ಸಹ ವಾದಿಗೆ ಸಹಾಯ ಮಾಡಲು ನಅತನ ಪರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಪಾಲು ಕೇಳಲು ವಾದಿಗೆ ಯಾವುದೇ ಹಕ್ಕು ಇಲ್ಲ ಎಂದು ನನಗೆ ಗೊತ್ತಿದ್ದರು ಸಹ ಅತನಿಗೆ ಸಹಾಯವಾಗಲು ಆತನ ಪರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಾಸಾ3 , ವಾದಿ ಹಾಗೂ ಸದರಿ ಮಂಜುನಾಥ ಬಡಕುರಿ ರವರು ಮಿಲಾಪಿಯಾಗಿ ಪ್ರತಿವಾದಿಯರ ವಿರುದ್ದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯವಾಗಲಿ ಎಂದು ವಾದಿ ಹಾಗೂ ಮಂಜುನಾಥ ಬಡಕುರಿ ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 10 ನೇ ಪ್ರತಿವಾದಿಯವರ ಪರ ಶ್ರೀ ಎನ್ ಬಿ ಕುಂಬಾರ ವಕೀಲರಿಂದ**

9. ನನ್ನ ಪ್ರಮಾಣ ಪತ್ರ ದಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ವಾದಿ ಪ್ರತಿವಾದಿ ನಂ.1 ರಿಂದ 9 ರವರ ಬಳಿ ಹೋಗಿ ಯಾವ ದಿನಾಂಕ, ತಿಂಗಳು ಮತ್ತು ಇಸ್ವಿಯಲ್ಲಿ ಪಾಲು ಕೇಳಿರುತ್ತಾನೆ ಎಂದು ನನಗೆ ಹೇಳಲು ಬರುವುದಿಲ್ಲ. ವಾದಿ ಹಾಗೂ 1 ರಿಂದ 8 ನೇ ಪ್ರತಿವಾದಿಯರು ರಕ್ತ ಸಂಬಂಧಿಗಳು ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮಂಜುನಾಥ ಬಡಕುರಿ ರವರು ಸರ್ವೇ ನಂ.53/1ಎ ಗೆ ಸಂಬಂದಿಸಿದಂತೆ ಕರಾರು ಪತ್ರವನ್ನು ಮಾಡಿಕೊಂಡಿದ್ದರಿಂದ 1 ನೇ ಪ್ರತಿವಾದಿ ಮತ್ತು ಸದರಿ ಮಂಜುನಾಥ ಬಡಕುರಿ ರವರ ಮದ್ಯ ಬಡೆದಾಟ ಆಗಿ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಿಮಿನಲ್ ಪ್ರಕರಣದಲ್ಲಿ ನಾನು ಮಂಜುನಾಥ ಬಡಕುರಿ ರವರ ಪರ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಪಿ.ಡಬ್ಲೂ.2**

10. ನವಲೂರು ಗ್ರಾಮದಲ್ಲಿ ನಾನು 10 ಎಕರೆ ಜಮೀನು ಹೊಂದಿರುತ್ತೇನೆ. ಸದರಿ ಗ್ರಾಮದಲ್ಲಿ ನಾನು 10 ಎಕರೆ ಜಮೀನು ಹೊಂದಿಲ್ಲ ಹಾಗೂ ಸದರಿ ಜಮಿನನ್ನು ನಾನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಾಸಾ3 ರವರು ನವಲೂರಿನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ಸದರಿ ಮಂಜುನಾಥ ಬಡಕುರಿ ರವರು ಖರೀದಿಸಿದ ಜಮಿನಿಗೆ ಪ್ರಾಸಾ3 ಗಿರಿಮಲ್ಲಪ್ಪ ಮತ್ತಿಗಟ್ಟಿ ರವರೇ ಪವರ ಆಫ್ ಅಟಾರ್ನಿ ಹೊಲ್ಡರ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಗೂ ಪ್ರಾಸಾ3 ಆಪ್ತ ಸ್ನೇಹಿತರಿದ್ದು ಬೆಳಿಗ್ಗೆಯಿಂದ ಸಂಜೆವೆರಗೆ ಕೂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಮ್ಮ ಖರ್ಚು ವೆಚ್ಚವನ್ನು ಮಂಜುನಾಥ ಬಡಕುರಿ ರವರೇ ನೊಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನಾನು , ಪ್ರಾಸಾ3 ಮತ್ತು ಸದರಿ ಮಂಜುನಾಥ ಬಡಕುರಿ ರವರು ಕೂಡಿಯೇ ಇರುತ್ತೇವೆ ಎಂದು ಹೇಳಿದರೇ ನನಗೆ ಸಾಕ್ಷಿ ನುಡಿಯಲು ಧಕ್ಕೆ ಬರುತ್ತದೆ ಎಂದು ತಿಳಿದು ಸದರಿ ಪ್ರಾಸಾ3 ಮತ್ತು ಮಂಜುನಾಥ ಬಡಕುರಿ ಯಾರು ಎಂದು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಾದಿಗೆ ಕುಮ್ಮಕ್ಕು ನೀಡಿ ನಾವೇ ದಾವೆ ದಾಖಲು ಮಾಡಲು ಹೇಳಿ ಈಗ ಆತನ ಪರವಾಗಿ ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

11. ನವಲೂರು ಗ್ರಾಮದಲ್ಲಿ ಈಗ ಎಕರೆಗೆ 2 ಕೋಟಿ ರೂ. ಬೆಲೆ ಇದೆ ಎಂದರೆ ನನಗೆ ಗೊತ್ತಿಲ್ಲ. ಈಗ ಜಮಿನಿನ ದರ ಹೆಚ್ಚಾಗಿದ್ದರಿಂದ ಹಣವನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ತಾಯಿಯನ್ನು ಬೈಲಹೊಂಗಲ ತಾಲೂಕಿನ ದೊಡವಾಡ ಗ್ರಾಮದಲ್ಲಿ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸರಿಯಲ್ಲ. ಹಾಗೂ ವಾದಿ ದೊಡವಾಡ ಗ್ರಾಮದಲ್ಲಿ ಜನಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಧಾರವಾಡದಲ್ಲಿ ಜನಿಸಿರುತ್ತಾರೆ ಎನ್ನುತ್ತಾರೆ. ವಾದಿ ಯಾವ ಆಸ್ಪತ್ರೆಯಿಲ್ಲಿ ಯಾವ ದಿನಾಂಕದಂದು ಜನಿಸಿರುತ್ತಾನೆ ಎಂದು ನನಗೆ ಗೊತ್ತಿಲ್ಲ.

12. 1 ನೇ ಪ್ರತಿವಾದಿಯ ನವಲೂರಿನ ಜಮಿನಿನಲ್ಲಿ ನಿವೇಶನಗಳಾಗಿ ಅದರಲ್ಲಿ ಮನೆಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಜನ್ಮ ದಿನಾಂಕ ನನಗೆ ಹೇಳಲು ಬರುವುದಿಲ್ಲ. 1 ನೇ ಪ್ರತಿವಾದಿ ತಂದೆ ಹನುಮಂತಪ್ಪ ಹಾಗೂ ನಾನು ಗೆಳೆಯರು ಎಂದು ಹೇಳಿರುವ ಸಂಗತಿ ಸುಳ್ಳಿದೆ ಎಂದರೆ ಸರಿಯಲ್ಲ. ಸದರಿ ವಾದಿಯ ತಾಯಿ ಬೈಲಹೊಂಗಲ ತಾಲೂಕಿನ ದೊಡವಾಡ ಗ್ರಾಮದ ಬುಡರಕಟ್ಟಿ ಗ್ರಾಮದ ಸಂಗಪ್ಪ ರವರೊಟ್ಟಿಗೆ ಮದುವೆ ಮಾಡಲಾಗಿತ್ತು ಎಂದರೆ ಸರಿಯಲ್ಲ. ಹಾಗೂ ಸದರಿ ಸಂಗಪ್ಪ ಮತ್ತು ವಾದಿಯ ತಾಯಿ ವೈವಾಹಿಕ ಜೀವನದಿಂದ ವಾದಿ ಜನಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಮನೆತನ ಹಾಗೂ 1 ರಿಂದ 8 ನೇ ಪ್ರತಿವಾದಿಯರ ಮನೆತನ ಬೇರೆ ಬೇರೆ ಎಂದರೆ ಸರಿಯಲ್ಲ.

**ಪಿ.ಡಬ್ಲೂ.2**

( 10 ನೇ ಪ್ರತಿವಾದಿ ಪರ ವಕೀಲರು 1 ರಿಂದ 8 ನೇ ಪ್ರತಿವಾದಿಯರ ವಕೀಲರು ಮಾಡಿದ ಪಾಟೀ ಸವಾಲನ್ನು ಮುಂದುವರೆದ ಅಳವಡಿಸಿಕೊಳ್ಳಲು ಕೋರಿಕೊಂಡ ಮೇರೆಗೆ ಅನುಮತಿಸಲಾಯಿತು)

**ಪಾಟೀ ಸವಾಲುಃ 15 ನೇ ಪ್ರತಿವಾದಿಯರ ಪರ ಶ್ರೀ ಬಿ ಎಸ ಎಸ ವಕೀಲರಿಂದ**

13. 10 ನೇ ಪ್ರತಿವಾದಿ ದಾವಾ ಜಮಿನಿನ ಮೂಲಕ ಮಾಲೀಕರಿಂದ ಅದನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗೂ 10 ನೇ ಪ್ರತಿವಾದಿಯಿಂದ 15 ನೇ ಪ್ರತಿವಾದಿ ಸದರಿ ದಾವಾ ಜಮಿನನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗೂ 10 ನೇ ಪ್ರತಿವಾದಿ ದಾಖಲೇಗಳನ್ನು ನೊಡಿ 15 ನೇ ಪ್ರತಿವಾದಿ ದಾವಾ ಜಮಿನಿನಲ್ಲಿ ನಿರ್ಮಿಸಿದ ನಿವೆಶನವನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗೂ 15 ನೇ ಪ್ರತಿವಾದಿ ಖರೀದಿಸಿದ ನಿವೇಶನದಲ್ಲಿ ಆತನೇ ಸ್ವಾದಿನದಲ್ಲಿ ಇದ್ದಾನೆ ಎಂದರೆ ಸರಿಯಲ್ಲ. ಹಾಗೂ ಅದನ್ನು ಆತ ಸ್ವಂತಕ್ಕೆ ಉಪಯೋಗಿಸುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಹಾಗೂ 15 ನೇ ಪ್ರತಿವಾದಿ ಸದರಿ ನಿವೇಶನಕ್ಕೆ ಸಂಬಂದಿಸಿದಂತೆ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗೂ ಆ ಬಗ್ಗೆ 10 ನೇ ಪ್ರತಿವಾದಿ ಸದರಿ ನಿವೇಶನಕ್ಕೆ ಸಂಬಂದಿಸಿದಂತೆ ಏನದಾರೂ ತಂಟೆ ತಕರಾರು ಬಂದರೇ ನಾನೇ ಬಗೆಹರಿಸುತ್ತೇನೆ ಎಂದು ಹೇಳಿ ಖರೀದಿ ಪತ್ರದಲ್ಲಿ ಬರೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಜಮಿನಿನ ಸಂಪೂರ್ಣ ಮಾಲೀಕರು 10 ನೇ ಪ್ರತಿವಾದಿ ಎಂದರೆ ಸರಿಯಲ್ಲ. ಹಾಗೂ ವಾದಿ ಈ ದಾವೆಯಲ್ಲಿ ಕೇಳಿರುವ ಪರಿಹಾರ ಸದರಿ 10 ರಿಂದ 18 ನೇ ಪ್ರತಿವಾದಿಗಳಿಗೆ ಬಂಧನಕಾರಕವಾಗುವುದಿಲ್ಲ ಎಂದರೆ ಸರಿಯಲ್ಲ. ಅದರೂ ಸಹ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 18 ನೇ ಪ್ರತಿವಾದಿಯರ ಪರ ಶ್ರೀ ಜಿ ಎಸ ಎಸ ವಕೀಲರಿಂದ**

14. ವಾದಿ ನನ್ನ ಸಂಬಂದಿಕನಲ್ಲ. ವಾದಿ ಹಾಗೂ ನಾನು ಒಂದೇ ಜಾತಿಯವರು ಅಲ್ಲ ಎಂದರೆ ಸರಿ. ಫಕ್ಕಿರಪ್ಪ ಹಜಾರೆ ರವರಿಗೆ ಹನುಮಂತಪ್ಪ ಮತ್ತು ಯಲ್ಲಪ್ಪ ಎಂಬ ಎರಡು ಜನ ಮಕ್ಕಳು ಎಂದರೆ ಸರಿ. ಹನುಮಂತಪ್ಪ ಹಾಗೂ ಆತನ ಹೆಂಡ ಸಾವಕ್ಕ ರವರಿಗೆ ಮೂರು ಜನ ಗಂಡು ಮಕ್ಕಳು 5 ಜನ ಹೆಣ್ಣು ಮಕ್ಕಳು. ಸದರಿ 5 ಜನ ಹೆಣ್ಣು ಮಕ್ಕಳು ಜಿವಂತ ಇದ್ದಾರೆ. ಸದರಿಯವರು ಯಾವ ಗ್ರಾಮದಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿಯವರ ಮದುವೆಗಳಿಗೆ ನಾನು ಹೊಗಿಲ್ಲ. ದಾವಾ ಜಮೀನುಗಳ ಉತಾರಗಳನ್ನು ನಾನು ನೊಡಿಲ್ಲ. ಪ್ರತಿವಾದಿ 1 ರಿಂದ 8 ರವರ ಮನೆತನಕ್ಕೆ ಮೂರು ಜಮೀನು ಹಾಗೂ ಒಂದು ಮನೆ ಇದೆ. ಸದರಿಯವರ ಮನೆತನಕ್ಕೆ 5 ಜಮೀನು ಹಾಗೂ ಮೂರು ಮನೆಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರ ಮೂರು ಜಮೀನುಗಳ

ಪೈಕಿ ಎರಡು ಜಮೀನು ಗಳ ಸರ್ವೆ ನಂ.50/5 ಮತ್ತು 53/1 ಇನ್ನೊಂದು ಜಮಿನಿನ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿಯವರ ಮನೆಗಳ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿಯವರ ಜಮೀನುಗಳ ಉತಾರಗಳಲ್ಲಿ ಯಾರ ಯಾರ ಹೆಸರು ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವಾ ಜಮೀನುಗಳ ಎಲ್ಲ ಉತಾರಗಳಲ್ಲಿ ವಾದಿಯ ಹೆಸರು ದಾಖಲಾಗಿವೆ. ವಾದಿಯ ಹೆಸರು ದಾವಾ ಜಮಿನುಗಳ ಎಲ್ಲ ಉತಾರಗಳಲ್ಲಿ ದಾಖಲಾಗಿವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. 1 ರಿಂದ 8 ನೇ ಪ್ರತಿವಾದಿಯರು ಯಾವ ಜಮಿನನ್ನು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಹಾಗೂ ಸದರಿಯವರ ಜಮಿನುಗಳ ಪೈಕಿ ಎಷ್ಟು ಜಮಿನುಗಳು ಬಿನ್ನ ಶೇತ್ಕಿ ಆಗಿ ಪರಿವರ್ತನೆಯಾಗಿವೆ ಎಂದು ನನಗೆ ಗೊತ್ತಿಲ್ಲ. ಹಾಗೂ ಬಿನ್ನ ಶೆತ್ಕಿ ಆದ ನಂತರ ಎಷ್ಟು ಪೋಟ ಹಿಸ್ಸಾಗಳು ಆಗಿವೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರ ದಲ್ಲಿ ಪಶ್ಚಾತ್ ಎಂಬ ಪದವನ್ನು ಬಳಸಿದ್ದು ಅದರ ಅರ್ಥ ನನಗೆ ಗೊತ್ತಿಲ್ಲ. ಸದರಿ ಪಶ್ಚಾತ್ ಎಂದರೆ ಸಾಕು ಮಗ ಎಂದರೆ ನನಗೆ ಗೊತ್ತಿಲ್ಲ. ವಾದಿ ಮಾರುತಿ ಹಾಗೂ ಸಾವಕ್ಕ ರವರ ದಾಂಪತ್ಯದಿಂದ ಜನಿಸಿದ ಮಗ ಅಲ್ಲ ಎಂದರೆ ಸರಿಯಲ್ಲ. ಸದರಿ ಮಾರುತಿ ತಿರಿಕೊಳ್ಳುವ ಮುನ್ನ ಅನಾರೋಗ್ಯದಿಂದ ಬಳಲುತ್ತಿದ್ದ ಎಂದರೆ ಇರಬಹುದು. ಸದರಿ ಮಾರುತಿ ರವರ ಅನಾರೊಗ್ಯದ ಪರಿಸ್ಥಿತಿಯನ್ನು ದುರುಪಯೊಗಪಡಿಸಿಕೊಂಡು ಸಾವಕ್ಕ ರವರು ವಾದಿ ಮಾರುತಿ ರವರ ಮಗ ಎಂದು ಆತನ ಶಾಲಾ ದಾಖಲಾತಿಗಳಲ್ಲಿ ಬರೆಸಿರುತ್ತಾಳೆ ಎಂದರೆ ಸರಿಯಲ್ಲ. ವಾದಿಯ ಹೆಸರನ್ನು ಶಾಲೆಗೆ ದಾಖಲು ಮಾಡುವ ಕಾಲಕ್ಕೆ ನಾನು ಹೊಗಿರಲಿಲ್ಲ.

16. ನವಲೂರಿನ ಗಣಪತಿ ದೇವಸ್ಥಾನದ ಬಳಿ 1 ರಿಂದ 8 ನೇ ಪ್ರತಿವಾದಿಯರ ಜಮೀನು ಇದೆ ಎಂದರೆ ಸರಿ. ಸದರಿ ಜಮಿನನ್ನು 10 ನೇ ಪ್ರತಿವಾದಿ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮಿನನ್ನು 10 ನೇ ಪ್ರತಿವಾದಿ ಖರೀದಿಸಿದ ನಂತರ ಅದರಲ್ಲಿ 18 ವಸತಿ ನಿವೇಶನಗಳನ್ನು ನಿರ್ಮಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗೂ ಸದರಿ ನಿವೇಶನಗಳನ್ನು 10 ನೇ ಪ್ರತಿವಾದಿ 12 ರಿಂದ 18 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗೂ ಸದರಿ ಖರೀದಿದಾರರು ತಾವು ಖರೀದಿಸಿದ ನಿವೇಶನದಲ್ಲಿ ಮನೆ ಕಟ್ಟಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ನನಗೆ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮಾರುತಿ ಹಜಾರೆ ರವರ ಮಗ ಅಲ್ಲದೇ ಇದ್ದರು ಸಹ ನಾನು ವಾದಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಿ.ಡಬ್ಲೂ.2**

( 15 ನೇ ಪ್ರತಿವಾದಿ ಪರ ವಕೀಲರು 18 ನೇ ಪ್ರತಿವಾದಿಯರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಮುಂದುವರೆದ ಪಾಟೀ ಸವಾಲು ಎಂದು ಅಳವಡಿಸಿಕೊಳ್ಳಲು ಕೋರಿಕೊಂಡ ಮೇರೆಗೆ ಅನುಮತಿಸಲಾಯಿತು)

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೊಲ್ ಜಯಕುಮಾರ ಹಿರಿಕುಡೆ.)**
**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.